ವರದಿಯನ್ನೊಪ್ಪಿಸಂವುದಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ೧೯೮೩–೮೪ನೇ ಸಾಲಿನಿಂದ ೧೯೮೪–೮೫ನೇ ಸಾಲಿನವರೆಗೆ ಧನ ವಿನಿಯೋಗ ಲೆಕ್ಕಗಳಂ ಮತ್ತು ವಿತ್ತೀಯ ಲೆಕ್ಕಪತ್ರಗಳ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾ ಲೇಖಾ ಪರೀಕ್ಷಕರ (ಸಿವಿಲ್ ಮತ್ತು ರೆವಿನ್ಯೂ) ವರದಿಯ ಬಗ್ಗೆ ಸಮಿತಿಯ ೩೮ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನೊಪ್ಪಿಸಲಾಯಿತು.

ಅರ್ಜಿಗಳನ್ನೊಪ್ಪಿಸಂವುದಂ

ಶ್ರೀ ಆರ್. ವೆಂಕಟರಾವಂಯ್ಯ.—ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯ ಅಡಿಯಲ್ಲಿ ಬರುವ ಕರ್ನಾಟಕ ರಾಜ್ಯ ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಗೆ ಸಂಬಂಧಿಸಿದ ಕಾರ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನಕಲು ತಯಾರಕ (ಕಾಪಿಯಿಸ್ಟ್)ರನ್ನು ಖಾಯಂಗೊಳಿಸುವ ಕುರಿತು ಅಥವಾ ಕಾಪಿಯಿಂಗ್ ಫೀಯನ್ನು ಪುನರ್ವಿಮರ್ಶಿಸಿ ವೇತನ ಕೊಡುವುದರ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನೊಪ್ಪಿಸಲಾಯಿತು.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಎಸ್. ಜಿ. ನಂಜಯ್ಯನವರ್ ಅವರ ಪರವಾಗಿ ಧಾರವಾಡ ಜಿಲ್ಲೆಯಲ್ಲಿ ಮಲಪ್ರಭ ಬಲದಂಡೆಯ ನಾಲೆಗಂ ಮೇಲಿರುವ ಹಿರೇ ಹಳ್ಳಕ್ಕೆ ಆಕ್ವಿಡಿಕ್ಟ್ ಕಟ್ಟಿ ನೀರಾವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಶ್ರೀಮತಿ ಸುಮಾ ವಸಂತ್‌ರವರ ಪರವಾಗಿ ಕೊಡಗು ಜಿಲ್ಲೆಯ ಕುಟ್ಟ ಗ್ರಾಮದ ಆಸುಪಾಸಿನಲ್ಲಿ ಕಾಡಾನೆಗಳ ಹಾವಳಿಯ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಸಭೆಗೆ ಒಪ್ಪಿಸಲಾಯಿತು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಡಿ. ದೇವೇಗೌಡರ ಮೇಲಿನ ಆಪಾದನೆಗಳ ವಿಚಾರದಲ್ಲಿ ಲೋಕಾಯುಕ್ತದ ವರದಿ ಬಹಿರಂಗವಾಗಿರುವ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಮಾನ್ಯ ವೀರಪ್ಪ ಮೊಯಲಿ ಮಂತ್ರಿತ್ವದ ಸದಸ್ಯರು ಒಂದು ಅಡ್ವರ್ಟೈಸ್‌ಮೆಂಟ್ ಮೋಷನ್‌ನನ್ನು ಕೊಟ್ಟಿದ್ದರು. ಲೋಕಾಯುಕ್ತಕ್ಕೆ ಶ್ರೀಮಾನ್ ಹೆಚ್ ಡಿ. ದೇವೇಗೌಡರ ವಿರುದ್ಧ ಅಲಿಗೇಷನ್ ಮಾಡಿ ಅವರ ಮೇಲೆ ಲೋಕಾಯುಕ್ತಕ್ಕೆ ಮಾನ್ಯ ಮುಖ್ಯಮಂತ್ರಿಗಳು ರೆಫರ್ ಮಾಡಿದಾಗ ಆ ರಿಪೋರ್ಟ್ ಕೂಡ ಈಗಾಗಲೇ ಲೋಕಾಯುಕ್ತರು ಗವರ್ನರ್‌ಗೆ ಸಬ್‌ಮಿಟ್ ಮಾಡಿದ್ದಾರೆ ಎನ್ನುವ ವರದಿ ಪೇಪರ್‌ನಲ್ಲಿ ಬಂದಿದೆ ಅದಾದ ಮೇಲೆ ಡಿಟೇಲ್ ಆದ ವರದಿ ನಿಜವಾಗಿ ಈ ಸದನದಲ್ಲಿ ಬಂದಿದ್ದರೆ ಎಲ್ಲರ ಗಮನಕ್ಕೆ ಬರುತ್ತಿತ್ತು. ಆದರೆ ಬಹುಶಃ ಗವರ್ನರ್ ಆಫೀಸ್ ಮುಟ್ಟುವುದಕ್ಕೆಂತ ಮುಂಚೆ ಆದು ಲೀಕ್ ಔಟ್ ಆಯಿತು. ತಾವು ಏನು ಮಾಡಿದಿರಿ ಎಂದರೆ ನಾವು ನೋಟೀಸ್ ಕೊಟ್ಟಮೇಲೆ ರೀಕನ್ಸಿಡರ್ ಮಾಡುತ್ತೇವೆಂದು ಹೇಳಿದ್ದಿರಿ.

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ ತಾವು ಈ ವಿಷಯದ ಬಗ್ಗೆ ಸನ್ಮಾನ್ಯ ಖಾರ್ಗೆಯವರು ಎತ್ತಿ ನೋಟೀಸ್ ಕೊಟ್ಟಾಗ ಪೂರ್ಣವಾಗಿ ವಿಚಾರ ಮಾಡಿ, ಇದು ನಿಯಮದ ಕೆಳಗೆ ಬರತಕ್ಕಂಥ ವಿಚಾರವಲ್ಲವೆಂದು ಈಗಾಗಲೇ ತಿರಸ್ಕಾರ ಮಾಡಿದ್ದೀರಿ. ಮತ್ತೆ ತಮ್ಮ ಮನವನ್ನು ಒಲಿಸಿ ಮತ್ತೆ ಈ ನಿರ್ಣಯವನ್ನು ಪುನರ್ ಪರಿಶೀಲನೆ ಮಾಡಬೇಕು, ಪ್ರಸ್ತಾಪ ಮಾಡಬೇಕು ಎನ್ನುವ ವಿಚಾರ ವಿದ್ದರೆ ಈ ವಿಚಾರ ಮನೆಯೊಳಗೆ ಪ್ರಸ್ತಾಪ ಮಾಡಲಿಕ್ಕೆ ಬರುವುದಿಲ್ಲ ಹಿಂದೆ ಕೌಲ್ ಅಂಡ್ ಶಕ್‌ದರ್‌ನಲ್ಲಿ ವ್ಯಕ್ತವಾಗಿರತಕ್ಕಂಥ ವಿಚಾರವನ್ನು ಈಗಾಗಲೇ ತಾವು ಹೇಳಿದ್ದೀರಿ. ಅದರ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡಬಾರದು. ದಯವಿಟ್ಟು ವಿಷಯವನ್ನು ಇಲ್ಲಿಗೆ ನಿಲ್ಲಿಸುವುದಕ್ಕೆ ಈ ಕ್ರಿಯಾಲೋಪವನ್ನು ಎತ್ತಿಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ನಾನು ಒಂದೊಂದು ಪಾಯಿಂಟ್ ಹೇಳಬೇಕೆಂದಿದ್ದೇನೆ. ಅವರು ಸರ್ಕಾರ ಈ ಒಂದು ವಿಚಾರವನ್ನು ಲೋಕಾಯುಕ್ತಕ್ಕೆ ರೆಫರ್ ಮಾಡಿದೆ ಎಂದು. ಸರ್ಕಾರ ಈ ವಿಚಾರವನ್ನು ಲೋಕಾಯುಕ್ತಕ್ಕೆ ರೆಫರ್ ಮಾಡಿಲ್ಲ. ಸರ್ಕಾರಕ್ಕೂ ಈ ವಿಚಾರಕ್ಕೂ ಯಾವ ಸಂಬಂಧವೂ ಇಲ್ಲ. ಒಬ್ಬ ಪ್ರೈವೇಟ್ ಸಿಟಿಸನ್, ಅವರು ಗವರ್ನರ್ ಅವರಿಗೆ ಮನವಿ ಕೊಟ್ಟಿದ್ದಾರೆ. ಗೌರ್ನರ್‌ರವರು, ಅವರು ಮಾಡಿದಂಥ ಅಲಿಗೇಷನ್‌ನಲ್ಲಿ ಏನಾದರೂ ಪ್ರೀಮಾಫೇಸಿ ಕೇಸ್ ಇದೆಯೇ ಎನ್ನುವ ವಿಚಾರದ ಬಗ್ಗೆ ಲೋಕಾಯುಕ್ತಕ್ಕೆ ರೆಫರ್ ಮಾಡಿದ್ದಾರೆ. ಸರ್ಕಾರಕ್ಕೂ ಅದಕ್ಕೂ ಏನೂ ಸಂಬಂಧವಿಲ್ಲ. ಅವರು ಹೇಳಿದಹಾಗೆ ವರದಿ ಲೀಕ್ ಔಟ್ ಆಗಿದ್ದರೆ ಸರ್ಕಾರದಿಂದ ಆಗಿಲ್ಲ. ಗೌರ್ನರ್‌ಗೆ ಲೋಕಾಯುಕ್ತರವರು ರಿಪೋರ್ಟ್ ಕೊಟ್ಟಿದ್ದಾರೆ. ಅದರ ಮೇಲೆ ವಿಚಾರ ಮಾಡುತ್ತಿದ್ದಾರೆ, ಅದು ಗೌರ್ನರ್‌ಗೆ ಸಂಬಂಧಪಟ್ಟ ವಿಚಾರವಾದ್ದರಿಂದ ಇಲ್ಲಿ ಅದನ್ನು ಎತ್ತಲಿಕ್ಕೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಅವರು ಪಾಯಿಂಟ್ ಆಫ್ ಆರ್ಡರ್ ರೇಸ್ ಮಾಡಿ ನೋಟೀಸ್ ಕೊಟ್ಟಿದ್ದೂದನ್ನು ಡಿಟೇಲ್ ಆಗಿ ಇಲ್ಲಿ ಗವರ್ನಮೆಂಟ್‌ಗೆ ತರುತ್ತೇನೆ.

> "When the Speaker withholds his consent to the moving of an adjournment motion in his chamber, it is neither obligatory to read out the motion to the House, nor to give the reasons for refusing the consent. After a member is informed of the Speaker's decision withholding his consent, no question is permitted to be raised in the House either on the subject-matter of the notice or the reasons for disallowance there of. If, however, a member would like to make a submission to the speaker to reconsider his decision, he can do so either in person to the Speaker in his chamber later during the day or by submitting a written representation to the Speaker in that behalf. In case the Speaker is satisfied on the submission of the member that there are adequate grounds to bring up the matter before the House, he would either mention it or permit the member to raise it on the following day, irrespective of the fact that the notice had been given on the previous day."

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗಾಗಲೇ ತಾವೇ ಹೇಳಿದ ಹಾಗೆ.

> "If, however, a member would like to make a submission to the Speaker to reconsider his decision, he can do so either in person to the Speaker in his chamber later during the day or by submitting a

written representation to the Speaker in that behalf'' I have already given a written representation to reconsider this matter. Therefore whatever point he has raised doesn't hold water. ತಾವು ನನ್ನನ್ನು ಪರ್ಮಿಟ್ ಮಾಡಿ. ಇದು ಅವರ ನೋಟೀಸಿಗೆ ಬಂದಿಲ್ಲವೆಂದು ಕಾಣುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ರೀ ಕನ್ಸಿಡರ್ ಮಾಡಿ ಎಂದು ಕೊಟ್ಟಿದ್ದೀರಿ. ಆ ಕಾಪಿಯನ್ನು ನನಗೆ ಕಳುಹಿಸಿದ್ದಾರೆ. You must advance reasons that the Speaker should reconsider his opinion. Mere saying that it may be reconsidered...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ರೈಸ್ ಮಾಡಿದ್ದಕ್ಕೆ ಉತ್ತರಿಸಿದೆ. ನಾನು ಬರೆದು ಕೊಟ್ಟ ರೀಸನ್ಸ್ ತಮಗೆ ಸ್ಯಾಟಿಸ್‌ಫೈ ಆಗಬಹುದೆಂದು ಕೊಟ್ಟಿದ್ದೇನೆ. ಅವರಿಗೆ ನಾನು ಸ್ಯಾಟಿಸ್‌ಫೈ ಮಾಡಬೇಕಾಗಿಲ್ಲ. ಇದನ್ನು ರೇಸ್ ಮಾಡುವುದಕ್ಕೆ ಸಫಿಷಿಯಂಟ್ ರೀಸನ್ಸ್ ಇದೆ ಎಂದು ತಮ್ಮ ಗಮನಕ್ಕೆ ತರಬೇಕೇ ಹೊರತು ಅವರ ಗಮನಕ್ಕೆ ಅಲ್ಲ. ಇದನ್ನು ತಾವು ರೀಕನ್ಸಿಡರ್ ಮಾಡಿ. ಇದು ಬಹಳ ಮಹತ್ವವಾದ ವಿಚಾರ. ಗವರ್ನರ್ ಆಫೀಸ್‌ನಿಂದ ಲೀಕ್‌ಔಟ್ ಆಗಿಲ್ಲ. ಜಿ. ಪುಟ್ಟಸ್ವಾಮಿಯವರು. ಹೋಗಿ ಗವರ್ನರ್ ಅನ್ನು ಭೇಟಿಯಾಗಬೇಕಾದಕ್ಕೆ ಮುಂಚೆ ಲೀಕ್‌ಔಟ್ ಆಗಿದೆ. ಯಾವ ಯಾವ ಚಾರ್ಜಸ್ ಪ್ರೂವ್ ಆಗಿದೆ ಎಂಬುದು ಸದನಕ್ಕೆ ಗೊತ್ತಾಗಬೇಕಲ್ಲ. ಸಿ.ಓ.ಡಿ. ರಿಪೋರ್ಟನ್ನು ನೇರವಾಗಿ ಕೊಡುತ್ತಾರೆ.....

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ನಾನು ರೂಲಿಂಗ್ ಕೊಡಬೇಕೇ ಬೇಡವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ನಾನು ಹೇಳುವುದನ್ನು ಕೇಳಿ, ಆ ಮೇಲೆ ರಿಜೆಕ್ಟ್ ಮಾಡಿ.

ಅಧ್ಯಕ್ಷರು.—ನೀವು ಹೇಳುವುದಕ್ಕೆ ಅವಕಾಶ ಕೊಡಬಾರದೆಂದು ಅವರ ಪಾಯಿಂಟ್ ಆಫ್ ಆರ್ಡರ್. ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ನಾನು ಎರಡೂ ಕಡೆಯ ವಾದವನ್ನು ಕೇಳಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ಅವರು ಪಾಯಿಂಟ್ ಆಫ್ ಆರ್ಡರ್ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ನಾಯಕರೇ ನೀವು ದಯವಿಟ್ಟು ಕುಳಿತುಕೊಳ್ಳಿ. ಕಾನೂನು ಸಚಿವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅದರ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈಗ ನಾನು ಪಾಯಿಂಟ್ ಆಫ್ ಆರ್ಡರ್ ಮೇಲೆ ರೂಲಿಂಗ್ ಕೊಡಬೇಕೇ ಬೇಡವೆ ? ಅವರು ಹೇಳುವುದಕ್ಕೆ ಅವಕಾಶ ಕೊಡಬಾರದೆಂಬುದೇ ಅವರ ಪಾಯಿಂಟ್ ಆಫ್ ಆರ್ಡರ್.

(ಗೊಂದಲ)

ಅಧ್ಯಕ್ಷರು.—ಸ್ವಲ್ಪ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—I have given it in writing. He raised objection saying either I should meet in your chamber.....

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರನ್ನು ಕಿತ್ತು ಹಾಕಿದರೆ ಅವಕಾಶ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಪಾಯಿಂಟ್ ಆಫ್ ಆರ್ಡರ್.....

ಅಧ್ಯಕ್ಷರು.—ತಾವು ಹೊಸಬರು, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನೇಕ ಸಾರಿ ಹೊಸಬರು ಚೆನ್ನಾಗಿ ಹೇಳುತ್ತಾರೆ.

ಅಧ್ಯಕ್ಷರು.—ಹಳಬರಿಗೆ ರೂಲ್ಸ್ ರೆಗ್ಯುಲೇಷನ್ ಗೊತ್ತಿಲ್ಲವೆಂದು ಆಯಿತು. ತಾವು ವಿಷಯ ಪ್ರಸ್ತಾಪ ಮಾಡಿದ್ದೀರಿ. ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಪಾಯಿಂಟ್ ಆಫ್ ಆರ್ಡರನ್ನು ಕಿತ್ತು ಹಾಕಿದರೆ ನಿಮಗೆ ಅವಕಾಶ ಸಿಗುತ್ತದೆ. ಇಲ್ಲದಿದ್ದರೆ ಆ ಪ್ರಶ್ನೆ ಬೇರೆ. ನಾನು ರೂಲಿಂಗ್ ಕೊಡಬೇಕೇ ಬೇಡವೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇವರೂ ಹೇಳುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು.—ಏನು ನಾಗರತ್ನಮ್ಮನವರೇ, ತಾವು ೬ ವರ್ಷ ಇಲ್ಲಿ ಕುಳಿತಿದ್ದವರು? ನೀವು ಹೀಗೆ ಹೇಳಿದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನ್‌ವಿನ್ಸ್ ಮಾಡಬೇಕಲ್ಲ ? ಕನ್‌ವಿನ್ಸ್ ಮಾಡಬೇಕಾದರೆ ಹೇಳುತ್ತೇನೆ. ಅದಕ್ಕೆ ಏಕೆ ಅವಕಾಶ ಕೊಡಬಾರದು ? ಯಾವ ರೀತಿ ರಿಪೋರ್ಟ್ ಬಂತು, ಯಾವ ರೀತಿ ಲೀಕ್‌ಔಟ್ ಆಯಿತು ಎಂಬುದನ್ನು ಹೇಳುತ್ತೇನೆ.

ಅಧ್ಯಕ್ಷರು.—ನಾನು ರೂಲಿಂಗ್ ಕೊಡಬೇಕೇ ಬೇಡವೆ ? ನಿಮಗೆ ಹೇಳುವುದಕ್ಕೆ ಅವಕಾಶ ಕೊಡಬಾರದೆಂಬುದೇ ಅವರ ಪಾಯಿಂಟ್ ಆಫ್ ಆರ್ಡರ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು, ನಾನು ಹೇಳುವುದನ್ನು ಕೇಳಿದಮೇಲೆ ರೂಲಿಂಗ್ ಕೊಡಿ.

ಅಧ್ಯಕ್ಷರು.—ಇದೇನು ಹೊಸ ವಿಷಯ ಅಲ್ಲ, ಹಳೆಯದೆ. ಆದ್ದರಿಂದ ನಾನು ಪಾಯಿಂಟ್ ಆಫ್ ಆರ್ಡರಿಗೆ ರೂಲಿಂಗ್ ಕೊಡುವವರೆಗೆ ಯಾರಿಗೂ ಅವಕಾಶ ಕೊಡುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ನಾನು ಪಾಯಿಂಟ್ ಆಫ್ ಆರ್ಡರನ್ನು ಕೆತ್ತುಹಾಕಿದರೆ ತಪ್ಪಿಗೆ ಅವಕಾಶ ಕೊಡುತ್ತೇನೆ, ಇಲ್ಲದಿದ್ದರೆ ಅವಕಾಶ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏನಾದರೂ ಮಾಡಿ, ಕೇಳಿಯಾದರೂ ಕೇಳಿ.....

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರಿಗೆ ರೂಲಿಂಗ್ ಕೊಟ್ಟಮೇಲೆ ಕೇಳಬಹುದು. ನೀವು ಹೀಗೆ ನಿಂತಿದ್ದರೆ ನಾನು ಪಾಯಿಂಟ್ ಆಫ್ ಆರ್ಡರಿಗೆ ರೂಲಿಂಗ್ ಕೊಡಬೇಕೇ ಬೇಡವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯ ಮಂತ್ರಿಗಳು ಯಾವ ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡಿದರು ? ಅವರು ಸರಕಾರಕ್ಕೆ ಕೊಟ್ಟಿಲ್ಲ, ಸಂಬಂಧ ಇಲ್ಲ ಎಂದರು, ಅದಕ್ಕೆ ನಾನು ಒಪ್ಪಿಕೊಂಡೆ. ಪ್ರೈವೇಟ್ ಸಿಟಿಜನ್ ಕೊಟ್ಟಿದು ಎಂದರು. ರಿಪೋರ್ಟ್ ಬಂದಮೇಲೆ ಏನಿದೆ ಎಂದು ತಿಳಿದುಕೊಳ್ಳಬೇಕೆಂದು ಎಲ್ಲರಿಗೂ ಕುತೂಹಲ ಇದೆ.

ಅಧ್ಯಕ್ಷರು.—ನಾನು ರೂಲಿಂಗ್ ಕೊಡುವವರೆಗೂ ಯಾರು ಏನೇ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನನಗೇ ಅಬ್‌ಸ್ಟ್ರಕ್ಟ್ ಮಾಡಿದರೆ ಹೇಗೆ ? ನಾನು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಬ್‌ಸ್ಟ್ರಕ್ಷನ್ ಅಲ್ಲ,

ಅಧ್ಯಕ್ಷರು.—ಯಾರಾದರೂ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ಎತ್ತಿದಾಗ ಅವರನ್ನೂ ಕೇಳಬೇಕು. ನಿಮ್ಮನ್ನೂ ಕೇಳಬೇಕು. ಕೇಳಿ ರೂಲಿಂಗ್ ಕೊಡಬೇಕು. ನಂತರ ಮೈನ್ ಸಬ್ಜೆಕ್ಟ್‌ಗೆ ಹೋಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದರು.

MR. SPEAKER.—Nothing will go on record unless I give ruling.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ರೂಲ್ಸ್ ಬಿಟ್ಟು ಮಾತನಾಡುತ್ತಿದ್ದೇನೆಯೇ ರೂಲ್ಸ್ ಪ್ರಕಾರವೇ ಕೇಳುತ್ತಿದ್ದೇನೆ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ನೀವು ಎತ್ತಿದ್ದೀರಿ. ಅವರು ರೂಲ್ಸ್ ಪ್ರಕಾರ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ನಾನು ರೂಲ್ಸ್ ಪ್ರಕಾರ ರೂಲಿಂಗ್ ಕೊಡಬೇಕಾಗುತ್ತದೆ. Nothing will go on record unless I give a ruling. x x

MR. SPEAKER.—You are at liberty to convince me in my chamber, I will read out once again.

"When the Speaker withholds consent to the moving of an adjournment motion in his chamber, it is neither

---

xx-ಅಧ್ಯಕ್ಷರ ಅಪ್ಪಣೆ ಮೇರೆಗೆ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರ ಮಾತುಗಳನ್ನು ದಾಖಲು ಮಾಡಲಿಲ್ಲ.

obligatory to read out the motion to the House not to give the reasons for refusing the consent. After a member is informed of the Speakers, decision withholding his consent no question is permitted to be raised in the House either on the subject matter of the notice or the reasons for disallowance there of. If, however, a member would like to make a submission to the Speaker reconsider his decision, he can do so either in person to Speaker in his chamber later during the day or by submitting a written representation to the Speaker in that behalf, In case the Speaker is satisfied on the submission of the member that there are adequate grounds to bring up the matter before the House, he would either mention it or permit the member to raise it on the following day. irrespective of the fact that the notice had been given on the previous day.N.P. When an adjournment motion is brought before the House, it is not necessary for the Speaker to read out the names of all members..... "

ನೀವೇನು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೀರಿ ಎಂದರೆ,—

" Leakage of the alleged report of the Lokayuk thaindic ting Sri H. D. Deve Gowda for nepotism in the newspaper"

ಇದನ್ನು ನಾನು ರಿಜೆಕ್ಟ್ ಮಾಡಿ ತಿಳಿಸಿದ್ದೇನೆ. ತಿಳಿಸಿದ ನಂತರ ತಾವು ನನ್ನ ಚೇಂಬರ್‌ಗೆ ಬಂದು ರೀ–ಕನ್‌ಸಿಡರೇಷನ್‌ಗೆ ಕನ್‌ವಿನ್ಸ್ ಮಾಡಬಹುದಾಗಿತ್ತು, ಇವತ್ತಿನವರೆಗೂ ತಾವು ನನ್ನ ಚೇಂಬರ್‌ಗೆ ಬಂದಿಲ್ಲ. ರೀ–ಕನ್‌ಸಿಡರ್ ಮಾಡಿ ಎಂದೂ ಕೇಳಿಲ್ಲ ಮತ್ತೊಂದು ಆಪ್ಲಿಕೇಷನ್ ಈಗ ಏನು ಕೊಟ್ಟಿದ್ದೀರಿ ಎಂದರೆ ಅದನ್ನೂ ಸಭೆಗೆ ವಿವರಿಸಿ ಹೇಳುತ್ತೇನೆ.

" With reference to our adjournment motion regarding leakage of the report of Lokayuktha indicting Sri H. D. Deve Gowda, we have received a letter from your Secretary enclosing the extract from Kaul & Shakdhar. Since it is a very important matter and a secret report presented to Governer by the Lokayuktha has been leaked out to the press when the Assembly is in Session. We request you to allow us to raise the matter in the Assembly. "

ಅದಕ್ಕೆ

" With reference to your Notice of adjournment motion (Notice) on the subject cited above, I am directed to state that Hon'ble Speaker has decided that there are no sufficient grounds to reconsider the decision already taken in this behalf "

ಈಗ ಲಕ್ಷ್ಮೀಸಾಗರ್ ಶಂಕರ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದರು. ಈಗ ನಾನು ಏನು ಹೇಳುತ್ತೇನೆ ಎಂದರೆ ಈಗಾಗಲೇ ನಾನು ಅಡ್ಜರ್ನ್‌ಮೆಂಟ್ ಮೋಷನ್ ರಿಜೆಕ್ಟ್ ಮಾಡಿದೆನೆ.

if you want to convince me you can come and convince me in my chamber. now I have upheld the point of order. hence the matter is closed. ನಿಮಗೆ ಏನಾದರೂ ಹೇಳುವುದಿತ್ತು ಅಂದರೆ ನನ್ನ ಚೇಂಬರ್‌ಗೆ ಬನ್ನಿ, ಹೇಳಿ ಬೇರೆ ಯಾವ ರೂಲ್ಸ್ ಪ್ರಕಾರ ಆದರೂ ಇದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡುತ್ತೇನೆ. ಆದರೆ ಈಗಲ್ಲ. ಈಗ ಮುಂದಿನ ವಿಷಯ ಗವರ್ನರ ಸೆಳೆಯುವ ಸೂಚನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮ್ಮ ನಿರ್ಣಯಕ್ಕೆ ನಾನು ತಲೆಬಾಗುತ್ತೇನೆ. ನಾನು ರೈಟಿಂಗ್‌ನಲ್ಲಿ ಕೊಟ್ಟಿದ್ದೇನೆ.

ಅಧ್ಯಕ್ಷರು.—ಮಾನ್ಯ ಮೊಯಿಲಿಯವರು, ಶ್ರೀಮತಿ ನಾಗರತ್ನಮ್ಮನವರು, ಕೆ. ಎಚ್. ಪಾಟೀಲರು ನೀವು ನಾಲ್ಕು ಜನರೂ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶನಿವಾರ, ಭಾನುವಾರ ಹೇಗೆ ಬರುವುದಕ್ಕಾಗುತ್ತದೆ ತಮ್ಮ ಛೇಂಬರ್‌ಗೆ ?

ಅಧ್ಯಕ್ಷರು.—ಅವರ ಪಾಯಿಂಟ್ ಆಫ್ ಆರ್ಡರನ್ನು ನಾನು ಎತ್ತಿ ಹಿಡಿದಿದ್ದೇನೆ. ಈಗ ಈ ವಿಷಯವನ್ನು ರೈಸ್ ಮಾಡುವುದಕ್ಕೆ ನಿಮಗೆ ಅವಕಾಶ ಕೊಡುವುದಿಲ್ಲ. ನಿಮಗೇನಾದರೂ ಹೇಳುವುದಿದ್ದರೆ ನನ್ನ ಛೇಂಬರ್‌ಗೆ ಬಂದು ಕನ್‌ವಿನ್ಸ್ ಮಾಡಿ. You are at liberty to convince me in my chamber.

Sri M. Mallikarjuna Kharge.—According to your own ruling we have given.

ಅಧ್ಯಕ್ಷರು.—ನಾನು ಛೇಬರ್‌ಗೆ ಹೋಗುತ್ತೇನೆ. ನೀವು ಬಂದು ಕನ್ವಿನ್ಸ್ ಮಾಡಿ.

ಶ್ರೀ ಎಂ. ಎಂ. ಖರ್ಗೆ.—ಈ ವಿಷಯದ ಬಗ್ಗೆ.....

Mr. Speaker.—Nothing will be recorded.

x x x

Mr. Speaker.—The matter is closed. Nothing will be recorded

x x x

ಅಧ್ಯಕ್ಷರು.—ತಾವು ಬನ್ನಿ ನನಗೆ ಕನ್ವಿನ್ಸ್ ಮಾಡಿ. ನಿಮಗೆ ಬೇಕೆಂದರೆ ನಾನು ಅವರನ್ನೂ ಕರೆಯಿಸುತ್ತೇನೆ.

x x x

ಅಧ್ಯಕ್ಷರು.—ತಪಂಗೆ ಅವಕಾಶ ಮಾಡಿಕೊಟ್ಟರೂ ಸಮಾಧಾನ ಇಲ್ಲ ಎಂದರೆ ಏನು ? ತಾವು ದಯವಿಟ್ಟು ಕುಳಿತುಕೊಳ್ಳಿ. ತಾವೂ ಕೂಡ ಮಂತ್ರಿಗಳಾಗಿದ್ದಿರಿ, ಈಗ ಡೆಪ್ಯೂಟಿ ಲೀಡರ್ ಆಗಿದ್ದೀರಿ. ಪಾರ್ಲಿಮೆಂಟರಿ ಸಿಸ್ಟವರ್‌ನಲ್ಲಿ ತಮಗೆ ಸಾಕಷ್ಟು ಅನುಭವ ಇದೆ. ನಾನು ರೂಲಿಂಗ್ ಕೊಟ್ಟಿದ್ದೇನೆ. ತಾವು ನಾಲ್ಕೂ ಜನ ನನ್ನ ಛೇಂಬರ್‌ಗೆ ಬನ್ನಿ. ತಾವು ನನಗೆ ಕನ್ವಿನ್ಸ್ ಮಾಡಿದರೆ ಬೇರೆ ರೀತಿಯಲ್ಲಿ ಅವಕಾಶ ಮಾಡಬೇಕೋ, ಬೇಡವೋ ನೋಡುತ್ತೇನೆ.

Sri M. Mallikarjuna Kharge.—We have given in writing.....

Mr. Speaker.—Nothing will be recorded after my ruling. whatever you have said it is expunged. You please convince me in the chamber.

---

xxx As Ordered by the Chair not recorded.

SRI M. MALLIKARJUNA KHARGE —By submitting a written representation to the Speaker in that behalf. I can convince. It is there.

SRI RAMAKRISANA HEGDE.—Is there any provision under which you can raise this question again on the floor of the House

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೀಕನ್ಸಿಡರ್ ಮಾಡುವುದಕ್ಕೆ ಪ್ರಾವಿಷನ್ ಇದೆ. ಮಾನ್ಯ ಪಂಪ್ಸ್ ಮಂತ್ರಿಯವರು ಅದನ್ನು ಸರಿಯಾಗಿ ಓದಿಲ್ಲವೆಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗ್ಡೆ.—ತಾವು ಇವತ್ತು. ನಿನ್ನೆ ಮೆಂಬರ್ ಆದವರ ಹಾಗೆ ಮಾತನಾಡುತ್ತಿದ್ದೀರಿ. ಇದುವರೆವಿಗೂ ಸದನದ ಸಮಯವನ್ನು ಹಾಳು ಮಾಡಿದಿರಿ. ಸ್ಪಷ್ಟವಾಗಿ ರೂಲಿಂಗ್ ಇದೆ. ಕೌಲ್ ಅಂಡ್ ಶೆಕ್ದರ್‌ನಲ್ಲಿ ಇದೆ. ನೀವು ಈ ರೀತಿ ಮಾಡಿದರೆ ಹೇಗೆ ?

ಅಧ್ಯಕ್ಷರು.—ಈಗ ಪಟಮಕ್ಕಿ ರತ್ನಾಕರ್ ಅವರ ಗಮನ ಸೆಳೆಯುವ ಸೂಚನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚೇಂಬರ್‌ನಲ್ಲೂ ರೀಕನ್ಸಿಡರ್ ಮಾಡಬಹುದಂ, ಇಲ್ಲಿಯೂ ಕೂಡಾ ರೀಕನ್ಸಿಡರ್ ಮಾಡಬಹುದು ಎಂದು ಇದೆ.

ಅಧ್ಯಕ್ಷರು.—ಈ ವಿಷಯ ಇಲ್ಲಿಗೆ ಸಾಕಂ. You come to my chamber and convince me.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಕೊಟ್ಟ ರೂಲಿಂಗ್ ಇದು ಅಲ್ಲವೇ ?

ಅಧ್ಯಕ್ಷರು.—ತಾವು ನಾಲ್ಕೂ ಮಂದಿ ನನ್ನ ಚೇಂಬರ್‌ಗೆ ಬನ್ನಿ.

SRI M. MALLIKARJUNA KHARGE.—To reconsider either we can give written representation.....

SRI RAMAKRISHNA HEGDE.—You can give written representation.

೩-೩೦ ಪಿ. ಎಂ.

(ಗೊಂದಲ)

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ. ಶ್ರೀ ರತ್ನಾಕರ್‌ರವರೇ ನೀವು ಹೇಳಿ.

ಗಮನ ಸೆಳೆಯುವ ಸೂಚನೆಗಳು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ನೌಕರರು ಅಗತ್ಯ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿರುವ ಧರಣಿ ಸತ್ಯಾಗ್ರಹದ ಬಗ್ಗೆ.

† ಶ್ರೀ ಪಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ನೌಕರರು ತಮ್ಮ ಅಗತ್ಯ ಬೇಡಿಕೆಗಳ ಈಡೇರಿಕೆಗಾಗಿ ನಡೆಸಿರುವ ಧರಣಿ ಸತ್ಯಾಗ್ರಹದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆಯನ್ನು ಓದುತ್ತೇನೆ.

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.